ಇ) ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವ ಸಂಬಂಧವಾಗಿ ವಿಶೇಷ ನೇರ ನೇಮಕಾತಿ ಸಮಿತಿ ಮುಖಾಂತರ 2220 ಕಿರಿಯ ಆರೋಗ್ಯ ಸಹಾಯಕರ ಹುದ್ದೆಗಳನ್ನು ಭರ್ತಿ ಮಾಡುವ ಕಾರ್ಯ ಪ್ರಕ್ರಿಯೆಯಲ್ಲಿರುತ್ತದೆ. ನೇಮಕಾತಿ ಕಾರ್ಯ ಪೂರ್ಣಗೊಂಡ ಕೂಡಲೇ ಭರ್ತಿ ಮಾಡಲಾಗುವುದು.

ಬ್ಯಾಕ್‌ಲಾಗ್ ಹುದ್ದೆಗಳಲ್ಲಿ ಕಿರಿಯ ಆರೋಗ್ಯ ಸಹಾಯಕರ ಹುದ್ದೆಗಳ ನೇಮಕಾತಿ ಕಾರ್ಯ ಮುಗಿದಿದ್ದು, ನೇಮಕಾತಿ ಹೊಂದಿದ ಅಭ್ಯರ್ಥಿಗಳಿಂದ ಸಿಂಧುತ್ವ ಪ್ರಮಾಣ ಪತ್ರ ಮತ್ತು ಪೊಲೀಸ್ ವರದಿ ಬಂದ ಕೂಡಲೇ ನೇಮಕಾತಿ ಆದೇಶ ಹೊರಡಿಸಲಾಗುವುದು.

ಕೊಡಗು ಜಿಲ್ಲೆಗೆ ಸೈನಿಕ ಶಿಕ್ಷಣ ಶಾಲೆ ಮಂಜೂರು ಮಾಡುವುದು

4036 (4545) : ಶ್ರೀ ಅಪ್ಪಚ್ಚುರಂಜನ್ ಎಂ.ಪಿ (ಸೋಮವಾರಪೇಟೆ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಯಾವ ಯಾವ ಜಿಲ್ಲೆಗಳಲ್ಲಿ ಸೈನಿಕ ಶಾಲೆಗಳು ಅಸ್ತಿತ್ವದಲ್ಲಿವೆ; ಅವು ಯಾವುವು;

ಆ) ಇವುಗಳಲ್ಲಿ ಸರ್ಕಾರದ ಶಾಲೆಗಳೆಷ್ಟು ಹಾಗೂ ಖಾಸಗೀ ಶಾಲೆಗಳೆಷ್ಟು; ಇವುಗಳ ನಿರ್ವಹಣೆ ಯಾವ ಇಲಾಖೆ ಅಧೀನದಲ್ಲಿರುತ್ತದೆ;

ಇ) ಈ ಶಾಲೆಗಳ ಪ್ರವೇಶಕ್ಕೆ ಅನುಸರಿಸುವ ಆಯ್ಕೆ ಪ್ರಕ್ರಿಯೆ ಮಾನದಂಡಗಳೇನು;

ಈ) ಕೊಡಗು ಜಿಲ್ಲೆಗೆ ಇಂತಹ ಸೈನಿಕ ಶಿಕ್ಷಣ ಶಾಲೆ ಮಂಜೂರು ಮಾಡಲು ಸರ್ಕಾರ ಉದ್ದೇಶಿಸಿದೆಯೇ; ಇದಕ್ಕಾಗಿ ಜಾಗ ನಿಗದಿಪಡಿಸಲಾಗಿದೆಯೇ; ಈ ನಿಟ್ಟಿನಲ್ಲಿ ಪ್ರಾದೇಶಿಕ ಅಸಮತೋಲನಾ ಸಮಿತಿಯು ಕೂಡಾ ಸೈನಿಕ ಶಿಕ್ಷಣ ಶಾಲೆ ತೆರೆಯುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿದ್ದು ನಿಜವೇ;

ಉ) ನಿಜವಿದ್ದಲ್ಲಿ, ಸೈನಿಕ ಶಿಕ್ಷಣ ಶಾಲೆ ಪ್ರಾರಂಭಿಸದಿರಲು ಕಾರಣಗಳೇನು; ಯಾವಾಗ ಪ್ರಾರಂಭಿಸಲಾಗುತ್ತದೆ; ಪ್ರಕ್ರಿಯೆ ಯಾವ ಹಂತದಲ್ಲಿದೆ? (ವಿವರ ನೀಡುವುದು)

ಪ್ರೊ: ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು):

ಅ) ರಾಜ್ಯದ ಬಿಜಾಪುರ ಜಿಲ್ಲೆಯಲ್ಲಿ ಮಾತ್ರ ಒಂದು ಸೈನಿಕ ಶಿಕ್ಷಣ ಶಾಲೆ ಇದೆ.

ಆ) ಬಿಜಾಪುರ ಸೈನಿಕ ಶಾಲೆಯು ಕೇಂದ್ರ ಸರ್ಕಾರದ ರಕ್ಷಣಾ ಮಂತ್ರಾಲಯದ ಅಧೀನದ ಸೈನಿಕ ಶಾಲಾ ಸೊಸೈಟಿ ಹೊಸದಿಲ್ಲಿ, ಇವರ ಅಧೀನದಲ್ಲಿರುತ್ತದೆ.

ಇ) ಪ್ರವೇಶ ಪರೀಕ್ಷೆಗಳ ಮೂಲಕ ಆಯ್ಕೆ ಮಾಡಲಾಗುತ್ತದೆ.

ಈ) ಕೊಡಗು ಜಿಲ್ಲೆಗೆ ಸೈನಿಕ ಶಿಕ್ಷಣ ಶಾಲೆ ಮಂಜೂರು ಮಾಡುವ ಉದ್ದೇಶ ಸದ್ಯದಲ್ಲಿ ಸರ್ಕಾರಕ್ಕಿರುವುದಿಲ್ಲ. ಈ ಉದ್ದೇಶಕ್ಕಾಗಿ ಜಾಗ ನಿಗದಿಪಡಿಸಿರುವುದಿಲ್ಲ. ಆದರೆ, ಪ್ರಾದೇಶಿಕ ಅಸಮತೋಲನಾ ನಿವಾರಣಾ ಉನ್ನತಾಧಿಕಾರ ಸಮಿತಿಯು ತನ್ನ ವರದಿಯಲ್ಲಿ ಕೊಡಗು ಜಿಲ್ಲೆಗೆ ಸೈನಿಕ ಶಾಲೆಯ ಅಗತ್ಯವಿದೆ ಎಂದು ಅಭಿಪ್ರಾಯಪಟ್ಟಿರುತ್ತದೆ.

ಉ) ಉದ್ಭವಿಸುವುದಿಲ್ಲ.

ಸೋಮವಾರಪೇಟೆ ತಾಲ್ಲೂಕಿನ ಆರೋಗ್ಯ ಕೇಂದ್ರಗಳಲ್ಲಿ ಖಾಲಿ ಇರುವ ಹುದ್ದೆಗಳು

4037 (4738) : ಶ್ರೀ ಅಪ್ಪಚ್ಚು ರಂಜನ್ ಎಂ.ಪಿ (ಸೋಮವಾರಪೇಟೆ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?